

**ನೀವು ದಲಿತ ಬಂಡಾಯದ ಹಾದಿಯಲ್ಲಿ ಬರೆಯಲು ನಿಮಗೆ ಪ್ರೇರಣೆಯಾಗಿದ್ದು ಏನು?**

ಬೇಸಾಯಗಾರರ ಕುಟುಂಬದಿಂದ ಬಂದ ನಾನು ದಲಿತರ ಬದುಕನ್ನು ಬಹು ಹತ್ತಿರದಿಂದ ಕಂಡವನು. ಅದರ ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡುವಾಗ ನನ್ನ ಗುರುಗಳಾಗಿದ್ದ ಸಿಜಿಕೆ, ಆಗ ಬಂಡಾಯ ಚಳವಳಿಯಲ್ಲಿ ಸಕ್ರಿಯರಾಗಿದ್ದ ಕಾಳೇಗೌಡ ನಾಗವಾರ, ಸಿದ್ಧಲಿಂಗಯ್ಯ, ಬರಗೂರು ಮುಂತಾದವರ ಪ್ರಭಾವದಿಂದಾಗಿ ನಾನೂ ಕೂಡ ಬಂಡಾಯ ಸಾಹಿತ್ಯದತ್ತ ಆಕರ್ಷಿತನಾದೆ. ಅದರ ಪ್ರಭಾವದಿಂದಲೇ ನಾನು 'ಮಹಾಪ್ರಸ್ಥಾನ', 'ದಮನ' ಮುಂತಾದ ದಲಿತ ಸಂವೇದಿ ಕಥೆಗಳನ್ನು ಬರೆದಿದ್ದು. 'ದಮನ' ಕಥೆಯನ್ನು ಸಿಜಿಕೆ ನಾಟಕವನ್ನಾಗಿ ರೂಪಾಂತರಿಸಿ ರಂಗದ ಮೇಲೆ ಪ್ರಯೋಗಿಸಿದ್ದರು. ನಗರಕ್ಕೆ ಬಂದ ಮೇಲೆ ಕೂಡ ಉದ್ಯೋಗವನ್ನರಸಿ ನಗರ ಪಟ್ಟಣಗಳಿಗೆ ಬರುವ ಬಡವರು, ಸ್ಲಮ್ ನಿವಾಸಿಗಳ ಬಗ್ಗೆ ಹಲವು ಕಥೆಗಳನ್ನು ಬರೆದಿದ್ದೇನೆ. ಮುಂಬೈನ ಕೊಳೆಗೇರಿ ಹಾಗೂ ರೆಡ್‌ಲೈಟ್ ಏರಿಯಾಗೆ ಭೇಟಿ ಕೊಟ್ಟು ಅಲ್ಲಿನ ಬದುಕನ್ನು ಕಣ್ಣಾರೆ ಕಂಡು ಅದನ್ನೆಲ್ಲ ಕಥೆಯಾಗಿಸಿದ್ದೇನೆ. ಅಲ್ಲಿನ ಬದುಕನ್ನೊಮ್ಮೆ ನೋಡಬೇಕು ನೀವು. ನಾವು ಒಂದು ಕಡೆ ಅಪ್ಪಅಮ್ಮ, ಗಂಡಹೆಂಡತಿ, ಸಂಬಂಧಗಳ ಭದ್ರತೆ ಇದೆಲ್ಲ ಇರುವ ಭಾರತೀಯ ಸಂಸ್ಕೃತಿ ಶ್ರೇಷ್ಠ ಅಂತೀವಿ. ಅಲ್ಲಿ ಹೆಂಡತಿಯರಿಗೆ, ತಾಯಿ, ತಂಗಿಯರಿಗೆ ಗಿರಾಕಿಗಳನ್ನು ಹುಡುಕುವ ಗಂಡಂದಿರು, ಅಣ್ಣ ತಮ್ಮಂದಿರನ್ನು ಕಂಡು ನಾನು ಬೆಚ್ಚಿಬಿದ್ದಿದ್ದೇನೆ. ಹೊಟ್ಟೆಪಾಡಿಗಾಗಿ ಹೆಣ್ಣು ಏನೆಲ್ಲ ಒತ್ತಡ, ಹಿಂಸೆಗೆ ಪಕ್ಕಾಗುತ್ತಿರುವ ಅದೇ ಜಾಗದಲ್ಲಿ ಹರಿದ

> ’ ಕನ್ನಡದ ಬಹುತೇಕ ವಿಮರ್ಶಕರು ಎಲ್ಲರನ್ನೂ, ಎಲ್ಲವನ್ನೂ ಓದುವುದೇ ಇಲ್ಲ. ಕೆಲವರನ್ನಷ್ಟೇ ಇಟ್ಟುಕೊಂಡು ವಿಮರ್ಶೆ ಮಾಡುತ್ತಾರೆ. ಹೊಸ ಬರಹಗಾರರನ್ನು ಅವರು ಗಂಭೀರವಾಗಿ ಪರಿಗಣಿಸುವುದಿಲ್ಲ. ‘